MVC No. 343/2023 – –

RW – 2

ದಿನಾಂಕಃ 10.06.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ 3 ನೇ ಎದುರುದಾರರ ಪರ ವಕೀಲರಿಂದ –

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ –

ನಾನು ವ್ಯವಸಾಯ ವೃತ್ತಿ ಮಾಡುತ್ತೇನೆ. ನನ್ನ ಹೆಸರಿನಲ್ಲಿ 5 ಎಕರೆ ಜಮೀನು ಇದೆ. ಅದರ ಸರ್ವೆ ನಂ. 135/5 ಆಗಿರುತ್ತದೆ. 1 ನೇ ಎದುರುದಾರ ನನ್ನ ಟ್ರಾಕ್ಟರ್ ನ ಚಾಲಕನಾಗಿರುತ್ತಾನೆ. 2 ನೇ ಎದುರುದಾರರು ನನ್ನ ಮಾವನಾಗಬೇಕು. 2 ನೇ ಎದುರುದಾರನ ಹೆಸರಿನಲ್ಲಿ 8 ಎಕರೆ ಜಮೀನು ಇದೆ. ಈ ಅಪಘಾತವು 1 ನೇ ಎದುರುದಾರನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿ. ಅರಶಿಕೆರೆ ಠಾಣೆಯಲ್ಲಿ 1 ರಿಂದ 3 ನೇ ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿ. 1 ನೇ ಎದುರುದಾರನ ಮೇಲೆ ಪ್ರಕರಣ ದಾಖಲಾದ ನಂತರ ಪೊಲೀಸರು ನನಗೆ ಸೇರಿದ ಟ್ರೈಲರ್ ಕೆಎ 17 ಟಿ 2661 ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. 2 ನೇ ಎದರುದಾರರ ಹೆಸರಿನಲ್ಲಿ ಕೆಎ 17 ಟಿಎ 0105 ಹೆಸರಿನ ಟ್ರಾಕ್ಟರ್ ಹಾಗೂ ಕೆಎ 17 ಟಿ 0646 ಟ್ರೈಲರ್ ಇದೆ ಎಂದರೆ ಸರಿ.

ಹರಪನಹಳ್ಳಿ ನ್ಯಾಯಾಲಯದಲ್ಲಿ ಇಂಡೆಮಿನಿಟಿ ಬಾಂಡ್ ಬರೆದುಕೊಟ್ಟು 2 ನೇ ಪ್ರತಿವಾದಿ ಅವರ ಹೆಸರಿನಲ್ಲಿ ಇದ್ದ ಟ್ರಾಕ್ಟರ್ ಹಾಗೂ ಟ್ರೈಲರ್ ನ್ನು ಬಿಡುಗಡ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಹರಪನಹಳ್ಳಿ ನ್ಯಾಯಾಲಯದಲ್ಲಿ 1 ನೇ ಎದುರುದಾರ ತನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ನ್ಯಾಯಾಲಯದಲ್ಲಿ ಒಪ್ಪಿಕೊಂಡು ದಂಡ ಪಾವತಿಸಿ ಪ್ರಕರಣನ್ನು ಮುಕ್ತಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅರ್ಜಿದಾರ ಮದ್ಯಪಾನ ಮಾಡಿ ತಾನೇ ದ್ವಿಚಕ್ರವಾಹನವನ್ನು ಚಾಲನೆ ಮಾಡಿಕೊಂಡು ಬಂದು ಟ್ರಾಕ್‌ಟ್‌ರ್ ಗೆ ಡಿಕ್ಕಿಪಡಿಸಿರುತ್ತಾನೆ ಎಂದು ನಾನು ಅರ್ಜಿದಾರನ ವಿರುದ್ದ ಯಾವುದೇ ದೂರು ದಾಖಲಿಸಿಲ್ಲ. ನನ್ನ ಬಾಬ್ತು ಟ್ರೈಲರ್ ಗೆ ವಿಮೆ ಅಪಘಾತದ ಸಮಯದಲ್ಲಿ ಇತ್ತು. ಸದರಿ ವಿಮೆ ಪಾಲಿಸಿಯನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ನ್ಯಾಯಾಯದಲ್ಲಿ ಇರುವ ದಾಖಲೆಗಳಲ್ಲಿ ಸದರಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ 1 ರಿಂದ 3 ನೇ ಎದುರುದಾರರಾದ ನಾವು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರಶಿಕೆರೆ ಪೊಲೀಸರು ಸಂಪೂರ್ಣ ತನಿಖೆ ಮಾಡಿ 1 ನೇ ಎದುರುದಾರನ ವಿರುದ್ದನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಈ ಕೇಸಿನ ಅರ್ಜಿದಾರರಿಗೆ ಪರಿಹಾರವನ್ನು ನಾವು 3 ಎದುರುದಾರರು ಕೊಡಲು ಬಾಧ್ಯರಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ